ಭದ್ರಾ ಬಲದಂಡೆ ನೀರಾವರಿ ಕೆಲಸ

656 - ಶ್ರೀ ಎಸ್.ಎ. ರವೀಂದ್ರನಾಥ (ಮಾಯಾಕೊಂಡ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಭದ್ರಾ ಬಲದಂಡೆ ನಾಲೆ ದುರಸ್ತಿ ಕಾಮಗಾರಿಯು ತುಂಬಾ ನಿಧಾನವಾಗಿರುವುದಕ್ಕೆ ಕಾರಣಗಳೇನು?*

ಆ) *ಸರ್ಕಾರದವರು ಸರಿಯಾದ ರೀತಿಯಲ್ಲಿ ಸಿಮೆಂಟನ್ನು ಒದಗಿಸಿ, ಸದರಿ ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರೈಸುವರೇ?*

ಶ್ರೀ ಹೆಚ್.ಡಿ. ದೇವೇಗೌಡ, ಮುಖ್ಯಮಂತ್ರಿಗಳು

ಅ) ಕೆಲವು ಕಾಲ ಸಿಮೆಂಟ್ ಸರಬರಾಜಿನಲ್ಲಿ ಕೊರತೆ ಇದ್ದುದರಿಂದ ಕಾಮಗಾರಿಯ ಪ್ರಗತಿಯಲ್ಲಿ ನಿಧಾನವಾಗಿತ್ತು. ಪ್ರಸ್ತುತ ಕಾರ್ಯಕ್ರಮದ ಪಟ್ಟಿಯಂತೆ ಕಾಮಗಾರಿಯನ್ನು ಮಾರ್ಚ್ 96ರ ವೇಳೆಗೆ ಮುಗಿಸಲು ಕ್ರಮವನ್ನು ಕೈಗೊಳ್ಳಲಾಗಿದೆ.

ಆ) ಹೌದು.

ಕಡಣಿ ಬ್ಯಾರೇಜ್ ದುರಸ್ತಿ ಕ್ರಮ

653 - ಶ್ರೀ ರವಿಕಾಂತ ಎಸ್.ಪಾಟೀಲ್ (ಇಂಡಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಇಂಡಿ ಮತಕ್ಷೇತ್ರದಲ್ಲಿ ಬರುವ ಕಡಣಿ ಬ್ಯಾರೇಜ್ಗೆ ಧಕ್ಕೆಯಾಗಿರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ಸರ್ಕಾರದಿಂದ ಹೆಚ್ಚು ಹಣ ಮಂಜೂರು ಮಾಡಿ ಬ್ಯಾರೇಜಿನ ದುರಸ್ತಿ ಕಾರ್ಯವನ್ನು ಮಾಡಲು ಕೂಡಲೇ ಕ್ರಮ ಕೈಗೊಳ್ಳುವರೇ?*

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್, ಸಣ್ಣ ನೀರಾವರಿ ರಾಜ್ಯ ಸಚಿವೆಯರು

ಅ) ಬಂದಿದೆ.

ಆ) ಕಡಣಿ ಬ್ಯಾರೇಜಿನ ದುರಸ್ತಿ ಕಾಮಗಾರಿಯನ್ನು ಭೂ ಸೇನಾ ನಿಗಮ ಕೈಗೊಂಡಿದ್ದು, ಬಿಜಾಪುರ ಜಿಲ್ಲಾಧಿಕಾರಿಗಳು ಈ ಕಾಮಗಾರಿಗೆ 10 ಲಕ್ಷ ರೂ. ಅನುದಾನ ಬಿಡುಗಡೆ ಮಾಡಿದ್ದಾರೆ. ಇದರಲ್ಲಿ ನಿಗಮವು ಈ ಕಾಮಗಾರಿಗೆ 50,000 ರೂ. ವೆಚ್ಚ ಮಾಡಿದ್ದಾರೆ. ಉಳಿದ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಲು ಭೂ ಸೇನಾ ನಿಗಮಕ್ಕೆ ಸೂಚನೆ ನೀಡಲಾಗುವುದು.

ಸಭೆಯ ಮುಂದಿಡಲಾಗುವ ಕಾಗದಪತ್ರಗಳ ಪಟ್ಟಿ

I ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿ) : ಮಾನ್ಯ ಅಧ್ಯಕ್ಷರೆ,

1978ನೇ ಇಸವಿಯ ಕರ್ನಾಟಕ ನಾಗರೀಕ ಸೇವಾ ಅಧಿನಿಯಮದ 8 (3)ನೇ ಕಲಮಿನ ಮೇರೆಗೆ ;

1) ಕರ್ನಾಟಕ ರಾಜ್ಯ ಆರಕ್ಷಕ ಸೇವೆಗಳು (ನೇಮಕಾತಿ) ನಿಯಮಗಳು 1967ಕ್ಕೆ ತಿದ್ದುಪಡಿ ಮಾಡುವ ಸಂಬಂಧದಲ್ಲಿ ದಿನಾಂಕ15.9.1994 ರಂದು ಹೊರಡಿಸಲಾದ ಸಿಆಸುಇ 13ಎಸ್ಆರ್ಡಿ 94ನೇ ಕ್ರಮಾಂಕದ ಅಧಿಸೂಚನೆ;

2) ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ (ಕೆಲವು ಲಿಪಿಕೇತರ ಕೇಡರ್ಗಳು) (ನೇಮಕಾತಿ) ನಿಯಮಗಳು 1993ಕ್ಕೆ ತಿದ್ದುಪಡಿ ಮಾಡುವ